ದಿ.16.09.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**</u> (ಶ್ರೀಮತಿ ಸಿ.ಪಿ.ಎ.) ಃ

3. ಲೋಕಾಯುಕ್ತ ಕಛೇರಿಗೆ ವಾಪಸು ಬಂದು ವಾಯ್ಸ ರೆಕಾರ್ಡರನ್ನು ಪಿ.ಐ. ವಾಪಸು ಕೊಟ್ಟೆನು. ನನ್ನ ಬಳಿ ಇದ್ದ ಹಣವನ್ನು ಪಿ.ಐ. ರವರು ನೀವೇ ಜೋಪಾನವಾಗಿ ಇಟ್ಟುಕೊಳ್ಳಿ ಎಂದು ತಿಳಿಸಿದರು. ನಂತರ ಒಂದು ಸೀಲ್ ನ್ನು ಸಾಕ್ಷಿದಾರರಿಗೆ ನೀವೇ ಇಟ್ಟುಕೊಳ್ಳಿ ಎಂದು ಹೇಳಿದರು. ಈ ವಿಷಯವನ್ನು ಯಾರಿಗೂ ತಿಳಿಸದಂತೆ ಗೌಪ್ಯವಾಗಿ ಇಡುವಂತೆ ನಾವು ಹೇಳಿ ಕಳುಹಿಸಿದಾಗ ಬರುವಂತೆ ತಿಳಿಸಿದರು. ನಾವು ಆರೋಪಿಯ ಕಛೇರಿಗೆ ಹೋಗಿ ಬಂದ ವಿಚಾರವನ್ನು ಕಂಪ್ಯೂಟರಿನಲ್ಲಿ ಟೈಪ್ ಮಾಡಿಕೊಂಡೆವು.

4. ನಂತರ ದಿ.03.03.2014 ರಂದು ಪುನಃ ಲೋಕಾಯುಕ್ತ ಕಛೇರಿಗೆ ಬಂದೆ. ಅಷ್ಟರಲ್ಲಿ ಸಾಕ್ಷಿದಾರರು ಆಗಲೇ ಬಂದಿದ್ದರು. ಪುನಃ ನಮಗೆ ವಾಯ್ಸ ರೆಕಾರ್ಡರನ್ನು ಮತ್ತು ಹಣವನ್ನು ಕೊಟ್ಟರು. ಮರು ವಹಿಸುವಿಕೆ ಪಂಚನಾಮೆ ಮಾಡಿದರು. ನಂತರ ಜೀಪಿನಲ್ಲಿ ನಮ್ಮನ್ನು ಕುರುಬರ ಹಾಸ್ಟೆಲ್ಲಿನಲ್ಲಿರುವ

ದೇವರಾಜು ಅರಸು ನಿಗಮದ ಕಛೇರಿಗೆ ಕಳುಹಿಸಿಕೊಟ್ಟರು. ಅಲ್ಲಿಗೆ ಹೋಗಿ ಕೇಳಲಾಗಿ, ಆರೋಪಿಯು ಇನ್ನೂ ಬಂದಿಲ್ಲವೆಂದು, ಬುಧವಾರ ಬರುತ್ತಾರೆಂದು ತಿಳಿಸಿದರು. ಪಿ.ಐ.ರವರಿಗೆ ಈ ವಿಚಾರವನ್ನು ಫೋನ್ ಮುಖಾಂತರ ತಿಳಿಸಿದೆ. ಅದಕ್ಕೆ ಅವರು ಕಛೇರಿಗೆ ಬರುವಂತೆ ಹೇಳಿದರು.

5. ಲೋಕಾಯುಕ್ತ ಕಛೇರಿಗೆ ಪುನಃ ಹಿಂದಿರುಗಿದಾಗ, ಪಿ.ಐ.ರವರು ವಾಯ್ಸ ರೆಕಾರ್ಡರನ್ನು ನನ್ನಿಂದ ಪಡೆದು ಹಣವನ್ನು ನೀವೇ ಜೋಪಾನವಾಗಿ ಇಟ್ಟು ಕೊಳ್ಳಿ ಎಂದು ಹೇಳಿದರು. ಸೀಲನ್ನು ಸಾಕ್ಷಿದಾರರಿಗೆ ಕೊಟ್ಟರು. ಪುನಃ ಮರು ವಹಿಸುವಿಕೆ ಪಂಚನಾಮೆ ಮಾಡಿದರು, ಹೇಳಿ ಕಳುಹಿಸಿದಾಗ ಬರುವಂತೆ ತಿಳಿಸಿದರು.

6. ದಿ.05.03.2014 ರಂದು ನಾನು ದೇವರಾಜು ಅರಸು ನಿಗಮದ ವ್ಯವಸ್ಥಾಪಕರಿಗೆ ಫೋನ್ ಮಾಡಿ, ಆರೋಪಿಯು ಕಛೇರಿಗೆ ಆ ದಿನ ಬರುತ್ತಾರೆಯೇ ಎಂದು ವಿಚಾರಿಸಿದೆನು. ಅದಕ್ಕೆ ಆರೋಪಿಯು ತಾನು ಮಧ್ಯಾಹ್ನ ಬರುವುದಾಗಿ, ನನಗೆ ಮರು ದಿನ ಕಛೇರಿಗೆ ಬರುವಂತೆ ತಿಳಿಸಿದರು. ಅದರಂತೆ ನಾವು ಮರು ದಿನ ಅಂದರೆ 06.03.2014 ರಂದು ನಾವು ಲೋಕಾಯುಕ್ತ ಕಛೇರಿಗೆ ಬಂದೆವು. ಲೋಕಾಯುಕ್ತ ಕಛೇರಿಯಿಂದ ಸಾಕ್ಷಿದಾರರನ್ನು ಮತ್ತು ನನ್ನನ್ನು ಆರೋಪಿಯು ಬಂದಿದ್ದಾರೋ ಇಲ್ಲವೊ ನೋಡಿಕೊಂಡು ಬರಲು ಆರೋಪಿಯ ಕಛೇರಿಗೆ ಕಳುಹಿಸಿದರು. ಆ ದಿನ ಆರೋಪಿಯು ಕಛೇರಿಯಲ್ಲಿ ಇರಲಿಲ್ಲ, ಮೀಟಿಂಗ್ ಗೆ ಹೋಗಿದ್ದಾರೆಂದು, ಸಾಯಂಕಾಲ 5.00 ಗಂಟೆಗೆ ಬರುತ್ತಾರೆಂದು ತಿಳಿಸಿದರು.

7. ಪುನಃ ನಾವು ಲೋಕಾಯುಕ್ತ ಕಛೇರಿಗೆ ವಾಪಸು ಬಂದೆವು. ಪುನಃ ಮರು ವಹಿಸುವಿಕೆ ಪಂಚನಾಮೆ ಮಾಡಿದರು. ನಂತರ ಆ ದಿನ ಸಂಜೆ 5.15 ಗಂಟೆಗೆ ನಾನು ಮತ್ತು ಒಬ್ಬರು ಸಾಕ್ಷಿದಾರರು ನನ್ನ ಬೈಕಿನಲ್ಲಿ ಹೊರಟೆವು. ನನ್ನ ಬಳಿ ವಾಯ್ಸ ರೆಕಾರ್ಡರು ಮತ್ತು ಹಣ ಇತ್ತು. ಲೋಕಾಯುಕ್ತ ಕಛೇರಿಯಿಂದ ಪಿ.ಐ. ರವರು ನಾವು ಕಛೇರಿ ಜೀಪಿನಲ್ಲಿ ದೇವರಾಜು ಅರಸು ನಿಗಮದ ಕಛೇರಿಗೆ ಬರುವುದಾಗಿ ತಿಳಿಸಿದರು. ನಾವು ಸಂಜೆ ಆರೋಪಿಯ ಕಛೇರಿಗೆ ಬಂದಾಗ ಅಲ್ಲಿ ಬಹಳಷ್ಟು ಜನರು ಇದ್ದರು. ನಮಗೆ ಆರೋಪಿಯನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಆರೋಪಿಯನ್ನು ಭೇಟಿಯಾದಾಗ ಸಂಜೆ 7.00 –

7.15 ಗಂಟೆಯಾಗಿತ್ತು.

8. ಆರೋಪಿಯನ್ನು ನಾನು ಭೇಟಿಯಾದಾಗ ನನ್ನ ಜೊತೆ ಇದ್ದ ಸಾಕ್ಷಿದಾರರಾದ ಚಾಸಾ-2 ರವರನ್ನು ಆರೋಪಿಯು ಇವರು ಯಾರು ಎಂದು ಕೇಳಿದರು. ಆಗ ನಾನು ಅದಕ್ಕೆ ಅವರು ನನ್ನ ಸಹೋದರಿ ಎಂದು ಹೇಳಿದೆ. ಆಗ ನಾನು ನನ್ನ ಕೆಲಸದ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ, ಆರೋಪಿಯು ಹಣ ತೆಗೆದುಕೊಂಡು ಬಂದಿದ್ದೀರಾ ಎಂದು ಕೈ ಸನ್ನೆ ಮಾಡಿದರು. ನಾನು ಹಣವನ್ನು ತಂದಿರುವುದಾಗಿ ತಿಳಿಸಿದಾಗ ಆರೋಪಿಯು ಒಂದು ಪೇಪರನ್ನು ನನ್ನ ಮುಂದಿಟ್ಟು, ಸದರಿ ಪೇಪರಿನಲ್ಲಿ ಹಣ ಇಡುವಂತೆ ತಿಳಿಸಿದರು. ನಾನು ಹಣವನ್ನು ಇಟ್ಟ ನಂತರ ಆರೋಪಿಯು ಹಣವನ್ನು ಎಣಿಸಿಕೊಂಡರು. ಹಣವನ್ನು ಕೊಟ್ಟ ನಂತರ ನಾನು ಹೊರಗೆ ಬಂದು ನನ್ನ ಮುಖವನ್ನು ಸವರಿಕೊಂಡು ಲೋಕಾಯುಕ್ತ ಪೋಲೀಸರು ಹೇಳಿದಂತೆ ಸನ್ನೆ ಮಾಡಿದೆನು. ಅದಕ್ಕೂ ಮುಂಚಿತವಾಗಿ ನಾನು ವಾಯ್ಸ ರೆಕಾರ್ಡರನ್ನು ಆನ್ ಮಾಡಿಕೊಂಡಿದ್ದೆನು.

9. ನಾನು ಸನ್ನೆ ಮಾಡಿದ ನಂತರ ಪಿ.ಐ.ರವರು ನೇರವಾಗಿ ಆರೋಪಿಯ ಕಛೇರಿಗೆ ಒಳಗೆ ಬಂದು, ನನ್ನನ್ನು ಆರೋಪಿಗೆ ತೋರಿಸಿ, ಇವರು ಯಾರು ಎಂದು ಕೇಳಿದರು. ಅದಕ್ಕೆ ಆರೋಪಿ ಗಂಗ ಕಲ್ಯಾಣ ಯೋಜನೆಯ ಫಲಾನುಭವಿ ಎಂದು ಹೇಳಿದರು. ನಂತರ ಪಿ.ಐ. ರವರು ನನ್ನ ಬಳಿ ಇದ್ದ ವಾಯ್ಸ ರೆಕಾರ್ಡರನ್ನು ತೆಗೆದುಕೊಂಡರು. ಆರೋಪಿಗೆ ಪಿ.ಐ. ರವರು ತಮ್ಮ ಗುರುತಿನ ಚೀಟಿಯನ್ನು ತೋರಿಸಿದರು ಹಾಗೂ ನಾನು ಆರೋಪಿಗೆ ಕೊಟ್ಟ ಹಣವನ್ನು ಎಲ್ಲಿ ಎಂದು ಕೇಳಿದರು. ಅದಕ್ಕೆ ಆರೋಪಿಯು ತನಗೆ ಯಾವುದೇ ಹಣ ಕೊಟ್ಟಿಲ್ಲ ಎಂದು ಹೇಳಿದರು. ಆಗ ನನ್ನ ಜೊತೆ ಇದ್ದ ಸಾಕ್ಷಿದಾರರು ಆರೋಪಿಯು ನಾನು ಕೊಟ್ಟ ಹಣವನ್ನು ಟೇಬಲ್ ಕೆಳಗಡೆ ಹಾಕಿದ್ದಾರೆ ಎಂದು ತಿಳಿಸಿದರು.

10. ಅದಕ್ಕಿಂತ ಮುಂಚೆ ಆರೋಪಿಯ ಬ್ಯಾಗನ್ನು ಪರಿಶೀಲಿಸಿದಾಗ 11 ಸಾವಿರ ರೂಪಾಯಿ ಹಣ ದೊರೆಯಿತು. ಈ ಹಣ ಯಾವುದು ಎಂದು ಆರೋಪಿಯನ್ನು ವಿಚಾರಿಸಿದಾಗ, ಆರೋಪಿಯು ಅದು ತನ್ನ ಸ್ವಂತ ಹಣ ಎಂದು ತಿಳಿಸಿದರು. ಟೇಬಲ್ ಕೆಳಗಡೆ ಹುಡುಕಾಡಿದಾಗ ನಾನು ಕೊಟ್ಟ ಹಣದ ಕವರ್

ಸಿಕ್ಕಿತು. ಕವರಿನಲ್ಲಿ ನಾನು ಕೊಟ್ಟ 15 ಸಾವಿರ ರೂಪಾಯಿ ಹಣ ಇತ್ತು.

11. ನಂತರ ಒಂದು ಬಟ್ಟಲಿನಲ್ಲಿ ಒಂದು ಪುಡಿಯನ್ನು ಹಾಕಿ ದ್ರಾವಣ ತಯಾರಿಸಿ, ಆರೋಪಿಯ ಬಲಗೈಯನ್ನು ಅದ್ದಿದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಎರಡು ಬಾಟಲಿಗಳಿಗೆ ಹಾಕಿ, ಸೀಲ್ ಮಾಡಿದರು. ಮತ್ತೊಂದು ಬಟ್ಟಲಿನಲ್ಲಿ ದ್ರಾವಣ ತಯಾರಿಸಿ, ಆರೋಪಿಯ ಎಡಗೈಯನ್ನು ಅದ್ದಿದಾಗ, ಸದರಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದ್ರಾವಣವನ್ನು ಎರಡು ಬಾಟಲಿಗಳಿಗೆ ಹಾಕಿ ಸೀಲ್ ಮಾಡಲಾಯಿತು. ನೋಟುಗಳನ್ನು ಹತ್ತಿಯಿಂದ ಒರೆಸಿ, ಸದರಿ ಹತ್ತಿಯನ್ನು ದ್ರಾವಣದಲ್ಲಿ ಅದ್ದಿದಾಗ ಅದು ಸಹ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು. ಹತ್ತಿಯನ್ನು ಫ್ಯಾನ್ ಗಾಳಿಯಲ್ಲಿ ಒಣಗಿಸಿ, ಅದನ್ನು ಸಹ ಪ್ಯಾಕ್ ಮಾಡಿಸಿ, ಸೀಲ್ ಮಾಡಿದರು.

12. ನನ್ನ ಬಳಿ ಇದ್ದ ವಾಯ್ಸ ರೆಕಾರ್ಡರನ್ನು ಸಿಬ್ಬಂದಿಗೆ ಕೊಟ್ಟು ಕೇಳಿಸಿದರು. ವಾಯ್ಸ ರೆಕಾರ್ಡರ್ ನಲ್ಲಿ ಇರುವ ಧ್ವನಿ ನನ್ನದು ಮತ್ತು ಆರೋಪಿಯದ್ದಾಗಿತ್ತು. ನಡೆದ ಘಟನೆಗಳನ್ನೆಲ್ಲಾ ದಾಖಲು ಮಾಡಿಕೊಂಡರು ಹಾಗೂ ಫೋಟೋಗಳನ್ನು ತೆಗೆದುಕೊಂಡರು. ನಾನು ಕೊಟ್ಟಿರುವ ದಾಖಲೆಗಳ ಫೋಟೋ ತೆಗೆದುಕೊಂಡರು.

13. ಮೊಬೈಲಿನಲ್ಲಿ ರೆಕಾರ್ಡ ಆಗಿದ್ದ ಪುನಃ ಲೋಕಾಯುಕ್ತ ಪೋಲೀಸರು ನನಗೆ ಮರು ದಿನ ಕಛೇರಿಗೆ ಬರುವಂತೆ ತಿಳಿಸಿದರು. ದಿ.05.03.2014 ರಂದು ನಾನು ಆರೋಪಿಗೆ ಫೋನ್ ಮಾಡಿ ಕೇಳಿರುವ ಸಂಭಾಷಣೆಯನ್ನು ನಾನು ಮೊಬೈಲಿನಲ್ಲಿ ರೆಕಾರ್ಡ ಮಾಡಿಕೊಂಡಿದ್ದೆನು. ಸದರಿ ರೆಕಾರ್ಡನ್ನು ಲೋಕಾಯುಕ್ತ ಪೋಲೀಸರು ಪೆನ್ ಡ್ರೈವ್ ನಲ್ಲಿ ತೆಗೆದುಕೊಂಡರು. ಮರು ದಿನ ನಾನು ಲೋಕಾಯುಕ್ತ ಕಛೇರಿಗೆ ಬಂದಾಗ ಲೋಕಾಯುಕ್ತ ಪೋಲೀಸರು ನನ್ನಿಂದ ಸಹಿಗಳನ್ನು ಪಡೆದುಕೊಂಡರು ಹಾಗೂ ಹಿಂದಿನ ದಿನ ತೆಗೆದ ಫೋಟೋಗಳನ್ನು ನನಗೆ ತೋರಿಸಿದರು. ಈಗಾಗಲೇ ನಿಪಿ-13 ರಿಂದ ನಿಪಿ-74 ರ ವರೆಗಿನ ಫೋಟೋಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋಗಳನ್ನು ನೋಡಿ ಅವೇ

ಫೋಟೋಗಳು ಎಂದು ಗುರುತಿಸಿದರು.

**<u>ಪಾಟೀ ಸವಾಲು :</u>** ಶ್ರೀ ಆರ್.ಕೆ. ವಕೀಲರು ಕಣ್ಣಿಗೆ ಚಿಕಿತ್ಸೆ ಪಡೆದಿರುವುದರಿಂದ ಹಾಜರಿರುವುದಿಲ್ಲವೆಂದು, ಪಾಟೀ ಸವಾಲು ಮುಂದೂಡುವಂತೆ ಅವರ ಪರ ಕುಮಾರಿ ಎಸ್.ಎಂ.ಎಚ್. ವಕೀಲರು ಕಾಲಾವಕಾಶ ಕೋರಿದ್ದರಿಂದ, ಅವರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರು,
ದಾವಣಗೆರೆ.